**ದಿನಾಂಕಃ 12/02/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು: ವಾದಿ ಪರ ಶ್ರೀ. ಬಿ ಜಿ ಎಸ್ ವಕೀಲರಿಂದಃ**

1. ವಾದಿ ಜಂಜರ್ ನಂಬರ್ 184, ಆಸ್ತಿ ನಂ. 213 ಕ್ಕೆ ಸಂಬಂಧಿಸಿದಂತೆ ದಾವೆ ಹೂಡಿದ್ದಾರೆ. ನಾನು ಈ ದಾವೆಯಲ್ಲಿ ಪಕ್ಷಗಾರನಾಗಿದ್ದೇನೆ. ನನಗೆ ನ್ಯಾಯಾಲಯದಿಂದ ನೋಟೀಸು ಬಂದಿಲ್ಲ. ನಾನೇ ಸ್ವತಃ ಸಾಕ್ಷಿ ನುಡಿಯಲು ಬಂದಿದ್ದೇನೆ.

2. ದಾವಾ ಸ್ವತ್ತುನ ಚಕ್ಕುಬಂದಿ ನನಗೆ ಗೊತ್ತಿಲ್ಲ. ದಾವಾ ಸ್ವತ್ತುನ ಚಕ್ಕುಬಂದಿ ಪೂಃ ವಾದಿಯ ಖಾಲಿ ಜಾಗ, ಪಃ ಕುಳ್ಳಯ್ಯ ರವರ ಮನೆ, ಉಃ ಬೋರಯ್ಯ ರವರ ಮನೆ, ದಃ ಸರಕಾರಿ ರಸ್ತೆ, ಈ ಮಧ್ಯ ಇರುವ ಸ್ವತ್ತಿನಲ್ಲಿ ಪ್ರತಿವಾದಿಗಳಿಗೆ ಹಕ್ಕು ಇದೆಯೇ ಎಂದರೆ ಇಲ್ಲ ಎಂದು ನುಡಿಯುತ್ತಾ ಸಣ್ಣ ಪುಟ್ಟಯ್ಯ ರವರಿಗೆ ಹಕ್ಕು ಇದೆ ಎಂದು ನುಡಿಯುತ್ತಾರೆ.

3. ನಾನು ಪಿ ಯು ಸಿ ವರೆಗೆ ಓದಿದ್ದೇನೆ. ದಾವಾ ಸ್ವತ್ತು ಚಂದ್ರಶೆಖರಯ್ಯ ಬಿನ್ ಸಣ್ಣ ಹೈದ ರವರ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿಯು ಶಾಮೀಲಾಗಿ ಮಾಡಿಸಿಕೊಂಡಿದ್ದಾರೆ ಅದು ನಮ್ಮ ಸ್ವತ್ತು ಎಂದು ನುಡಿಯುತ್ತಾರೆ. ನನ್ನ ತಂದೆಯ ಹೆಸರು ಚಂದ್ರಶೇಖರಯ್ಯ. ಆಸ್ತಿ ನಂ. 225 ಮತ್ತು 226 ಸಣ್ಣ ಹೈದ, ಚಂದ್ರ ಶೇಖರ ಮತ್ತು ಸಣ್ಣ ಪುಟ್ಟಯ್ಯ, ಕುಳ್ಳಯ್ಯ ರವರ ಹೆಸರಿನಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು, ಸ್ವತ್ತಿನ ನಂ. 213 ಚಂದ್ರಶೇಖರಯ್ಯ, ಕುಳ್ಳಯ್ಯ ರವರಿಗೆ ಸೇರಿದ್ದು ಎಂದು ನುಡಿಯುತ್ತಾರೆ. ನಾನು ಚಂದ್ರಶೇಖರಯ್ಯ, ಕುಳ್ಳಯ್ಯ ರವರ ಹೆಸರಿನಲ್ಲಿರುವ ಅಸೆಸ್ಮೆಂಟ್ ರಿಜಿಸ್ಟರ್ ನೋಡಿದ್ದೇನೆ. ಕುಳ್ಳಯ್ಯ ರವರ ಮಗ ಚಂದ್ರ ಶೇಖರಯ್ಯ ರವರಿಗೆ ಸ್ವತ್ತಿನ ನಂ. 213 ಅವರ ತಂದೆ ಯಿಂದ ಬಂದಿದೆ. ನನ್ನ ತಾತ ಕುಳ್ಳಯ್ಯ ರವರ ಹೆಸರಿನಲ್ಲಿರುವ ದಾಖಲೆ ನೋಡಿಲ್ಲ.

4. ವಾದಿ ಯಾವ ಪರಿಹಾರ ಕೋರಿ ಈ ದಾವೆ ಹೂಡಿದ್ದಾರೆಂದು ಗೊತ್ತಿಲ್ಲ. ದಾವಾ ಸ್ವತ್ತುನ ಪೂಃ ಸಣ್ಣ ಪುಟ್ಟಯ್ಯ ರವರ ಜಾಗ ಮತ್ತು ಮನೆ, ಪಃ ಗಲ್ಲಿ ಮತ್ತು ಜಗಧೀಶ ರವರ ಮನೆ, ಉಃ ತಮ್ಮಣ್ಣ, ಕುಳ್ಳಯ್ಯ ರವರ ಮನೆ, ದಃ ಪಂಚಾಯಿತಿ ರಸ್ತೆ ಇದೆ. ಸ್ವತ್ತಿನ ನಂ. 214 ಕ್ಕೂ ಸಹ ಅದೇ ಚಕ್ಕುಬಂದಿ ಇದೆ. ದಾವಾ ಸ್ವತ್ತುಗೆ ನಮೂದಿಸಿರುವ ಚಕ್ಕುಬಂದಿಗೂ

ಈಗ ನಾನು ಹೇಳಿದ ಚಕ್ಕುಬಂದಿಗೂ ವ್ಯತ್ಯಾಸ ಇದೆ ಎಂದರೆ ಸರಿ. ನಾನು ಈಗ ಹೇಳಿದ ಚಕ್ಕುಬಂದಿ ಸ್ವತ್ತಿನ ಸಂಖೆ 198 ಕ್ಕೆ ಸಂಬಂಧಿಸಿದ್ದು ಎಂದರೆ ಸರಿ. ವಾದಿಯ ತಂದೆ ಹೆಸರು ಸಣ್ಣಯ್ಯ ಅಲಿಯಾಸ್ ಸಣ್ಣ ಹೈದ ಎಂದು ಕರೆಯುತ್ತಿದ್ದರು ಎಂದರೆ ಸರಿ. ಯಾರ ಯಾರ ಸ್ವತ್ತು ಯಾರ ಯಾರ ಹೆಸರಿನಲ್ಲಿ ದಾಖಲೆಗಳು ಇದೆ ಎಂದು ನೋಡುವ ಅಭ್ಯಾಸ ನನಗೆ ಇಲ್ಲ. ವಾದಿಗೆ ಆರ್ ಹೊಸಹಳ್ಳಿ ಗ್ರಾಮದಲ್ಲಿನ ಯಾವ ಸ್ವತ್ತಿಗೆ ಸಂಬಂಧಿಸಿದಂತೆ ಆಸ್ತಿ ಇದೆ ಎಂದು ನನಗೆ ಗೊತ್ತಿಲ್ಲ.

5. 1, 2 ಮತ್ತು 3 ನೇ ಪ್ರತಿವಾದಿಗಳು ನನ್ನ ಚಿಕ್ಕಪ್ಪನ ಮಕ್ಕಳು. ಪ್ರತಿವಾದಿಗಳು ನನ್ನ ಚಿಕ್ಕಪ್ಪನ ಮಕ್ಕಳಾದ್ದರಿಂದ ಅವರಿಗೆ ಅನುಕೂಲ ಮಾಡಲು ಸಾಕ್ಷಿ ನುಡಿಯಲು ಬಂದಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತು ನಮ್ಮದೇ ಎಂದು ಹೇಳಲು ನ್ಯಾಯಾಲಯಕ್ಕೆ ಬಂದಿದ್ದೇನೆ. ಪ್ರತಿವಾದಿಗಳ ಸ್ವತ್ತು ಎಂದು ನುಡಿಯಲು ಬಂದಿಲ್ಲ. ದಾವಾ ಸ್ವತ್ತು ನಮ್ಮದು ಎಂದು ತೋರಿಸಲು ನಾನು ದಾಖಲೆ ಹಾಜರುಪಡಿಸಿಲ್ಲ, ಆದರೆ ಪ್ರತಿವಾದಿಗಳು ಹಾಜರುಪಡಿಸಿದ್ದಾರೆ. ದಾವಾ ಸ್ವತ್ತುನಲ್ಲಿ ಯಾರು ಸ್ವಾಧೀನ ಹೊಂದಿದ್ದಾರೆ ಎಂದು ವಿಚಾರಿಸಿದ್ದೀರಾ ಎಂದರೆ ಸಾಕ್ಷಿಯು ನನ್ನ ತಂದೆಯ ಅಣ್ಣ ತಮ್ಮಂದಿರು ವಿಭಾಗ ಮಾಡಿಕೊಂಡು ಅಕ್ಕ ಪಕ್ಕ ಇದ್ದಾರೆ ಎಂದು ನುಡಿಯುತ್ತಾರೆ. ನನ್ನ ತಂದೆ, ಸಣ್ಣ ನಂಜಯ್ಯ, ಸಣ್ಣ ಪುಟ್ಟಯ್ಯ ಮತ್ತು ತಮ್ಮಣ್ಣ ರವರು ವಿಭಾಗ ಮಾಡಿಕೊಂಡಿದ್ದಾರೆ. ಬರವಣಿಗೆ ಮುಖಾಂತರ ವಿಭಾಗ ಮಾಡಿಕೊಂಡಿದ್ದು ನನಗೆ ಗೊತ್ತಿಲ್ಲ. ಯಾವ ವಿಸ್ತೀರ್ಣಕ್ಕೆ ಈ ದಾವೆ ಹೂಡಿದ್ದಾರೆ ಎಂದು ಗೊತ್ತಿಲ್ಲ. ದಾವಾ ಸ್ವತ್ತು ನನ್ನ ತಂದೆ ಹೆಸರಿನಲ್ಲಿದೆ.

6. ಸ್ವತ್ತಿನ ನಂ.215 ರ ಪೂಃ ಬೋರಯ್ಯ ರವರ ಮನೆ, ಪಃ ಜಗಧೀಶ ರವರ ಬ್ಯಾರನ್, ಉಃ ಸಣ್ಣ ನಂಜಯ್ಯ ರವರ ಮನೆ, ದಃ ತಮ್ಮಣ್ಣ ರವರ ಮನೆ. ಸ್ವತ್ತಿನ ನಂ.216 ರ ಚಕ್ಕುಬಂದಿಯು ಸ್ವತ್ತಿನ ನಂ.215 ರಂತೆ ಇದೆ. ಪ್ರತಿವಾದಿಗಳ ಮಾತು ಕೇಳಿ ದಾವಾ ಸ್ವತ್ತು ಅನ್ನು ಕಬಳಿಸಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ನಲ್ಲಿ ವಾದಿ ಸ್ವಾಧೀನದಲ್ಲಿದ್ದು ಅವರಿಗೆ ತೊಂದರೆ ನೀಡುತ್ತಿದ್ದೇವೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿರುವ ವಿಚಾರಗಳು ಗೊತ್ತು. ನಾವೇ ಹೇಳಿ ಬರೆಸಿದ್ದೇನೆ. 2017 ರಲ್ಲಿ

ವಾದಿ ದಾವಾ ಸ್ವತ್ತುನಲ್ಲಿ ಮನೆ ಕಟ್ಟಲು ಹೋದಾಗ ಪ್ರತಿವಾದಿಗಳು ತೊಂದರೆ ನೀಡಿದರು ಎಂದರೆ ಸರಿಯಲ್ಲ. ದಾವಾ ಸ್ವತ್ತುನಲ್ಲಿ ವಾದಿಯ ತಂದೆಯ ಕಾಲಕ್ಕೆ ಮನೆ ಇತ್ತು ಎಂದರೆ ಸರಿ. ಆ ಮನೆ ಬಿದ್ದ ನಂತರ ವಾದಿ ಹುಲ್ಲು ಗುಡಿಸಲನ್ನು ಹಾಕಿಕೊಂಡಿದ್ದರು ಎಂದರೆ ಸರಿಯಲ್ಲ. ಈಗ ಅದು ಖಾಲಿ ನಿವೇಶನ ಇದೆ ಎಂದರೆ ಸರಿ. ನಾನು ಪ್ರತಿವಾದಿಗಳ ಜೊತೆ ಶರೀಕಾಗಿ ವಾದಿಗೆ ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**1 ನೇ ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**